ಈ ದಿನ ದಿನಾಂಕಃ 16.09.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

4. ದಾವಾ ಆಸ್ತಿ ಪಂಚಾಯಿತಿ ದಾಖಲೆಗಳಲ್ಲಿ ಬದಲಾವಣೆ ಮಾಡಲು ಯಾವುದಾದರೂ ನೊಂದಾಯಿತ ದಾಖಲೆಗಳು ನನ್ನ ತಂದೆ ಹೆಸರಿಗಾಗಲೀ ಅಥವಾ ಅಜ್ಜನ ಹೆಸರಿಗಾಗಿಲೀ ಇದೆಯೇ ಎಂದರೆ ಸಾಕ್ಷಿಯು ಯಾವುದೇ ದಾಖಲೆ ಇರುವುದಿಲ್ಲವೆಂದು ನುಡಿಯುತ್ತಾರೆ. ಮೊದಲನೆ ಬಾರಿಗೆ ದಾವಾ ಆಸ್ತಿಯ ಪಂಚಾಯಿತಿ ದಾಖಲೆಯನ್ನು ನನ್ನ ಅಜ್ಜನ ಹೆಸರಿಗೆ ಮಾಡಲಾಗಿರುತ್ತದೆ. 1975-76 ನೇ ಸಾಲಿನ ಪಂಚಾಯಿತಿ ದಾಖಲೆಗಳಲ್ಲಿ ಹೆಸರುನಮೂದಾಗಿದ್ದು ಅದರ ಪೂರ್ವದ ದಾಖಲೆಗಳು ಇರುವುದಿಲ್ಲವೆಂದು ಪಂಚಾಯತಿಯವರು ತಿಳಿಸಿರುತ್ತಾರೆ. ಯಾವ ದಾಖಲೆ ಆದಾರದ ಮೇರೆಗೆ ಖಾತೆ ಬದಲಾವಣೆ ಮಾಡಲಾಗಿರುತ್ತದೆ ಎಂದು ನಿಡಿ 18 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ.

5. ನಿಡಿ 18 ರಿಂದ 25 ರಲ್ಲಿರುವ ಡಿಸಿಬಿ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ನಲ್ಲಿ ಅಳತೆ ಹಾಗೂ ಚೆಕ್ಕುಬಂದಿ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಡಿ 26 ರಲ್ಲಿ ನಮೂದಾಗಿರುವ ಚೆಕ್ಕುಬಂದಿ ಯಾವ ದಾಖಲೆಯ ಆದಾರದ ಮೇರೆಗೆ ನಮೂದಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಡಿ 26 ರಲ್ಲಿ ಪೂರ್ವಕ್ಕೆ ಸ. ನಂಬರ್ ಎಂದು ನಮೂದಾಗಿದ್ದು ಸಂಖ್ಯೆ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಡಿ 26 ರಲ್ಲಿ ದಕ್ಷಿಣಕ್ಕೆ ವಾದಿ ಜಿ ಬಿ ನಾಗರಾಜರವರ ಜಾಗ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ 26 ರಲ್ಲಿ ಉತ್ತರಕ್ಕೆ ಹೆಚ್ ವಾಗೀಶ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ 26 ರಲ್ಲಿ ಉತ್ತರಕ್ಕೆ ಮನೆ ಸಂಖ್ಯೆ ಸರ್ವೆ ನಂಬರಿನ ಸಂಖ್ಯೆ ನಮೂದಾಗಿರುವುದಿಲ್ಲ ಎಂದರೆ ಸರಿ.

6. ವಾದಿಯ ವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಿಃ 30.10.1964 ರ ಕ್ರಯಪತ್ರವನ್ನು ನಾನು ನೋಡಿ ಓದಿ ತಿಳಿದುಕೊಂಡಿರುತ್ತೇನೆ. ಕ್ರಯಪತ್ರದಲ್ಲಿ ನಮೂದಾದ ಚೆಕ್ಕುಬಂದಿ ಒಳಗಿನ ಆಸ್ತಿಗಾಗಿ ಪ್ರಸ್ತುತ ದಾವೆಯನ್ನು ವಾದಿ ದಾಖಲಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಚೆಕ್ಕುಬಂದಿ ಒಳಗಿನ ಆಸ್ತಿ ನಮ್ಮದು ಎಂದು ತೋರಿಸಲು ಯಾವುದೇ ನೊಂದಾಯಿತ ದಾಖಲೆ ಇರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ತಿಳುವಳಿಕ ಇರುವುದಿಲ್ಲವೆಂದು ನುಡಿಯುತ್ತಾರೆ.

7. ನಾನು ಬಿ ಎ ವ್ಯಾಸಾಂಗ ಮಾಡಿರುತ್ತೇನೆ. ಹಾಗಾಗಿ ವಾದಿ ಸಲ್ಲಿಸಿರುವ ವಾದ ಪತ್ರ ಹಾಗೂ ದಾಖಲೆಗಳನ್ನು ನಾನು ಓದಿ ತಿಳಿದು ಕೊಂಡಿರುತ್ತೇನೆ ಎಂದರೆ ಸರಿ. ಪಂಚಾಯಿತಿ ಆಸ್ತಿಗಳಲ್ಲಿ ಕಾಲ ಕಾಲಕ್ಕೆ ಆಸ್ತಿ ಸಂಖ್ಯೆ ಬದಲಾವಣೆ ಆಗುತ್ತದೆ ಎಂದರೆ ಸರಿ. ಸಂಖ್ಯೆ ಬದಲಾವಣೆ ಆದಾಗ ಚೆಕ್ಕುಬಂದಿ ಹಾಗೂ ವಿಸ್ತೀರ್ಣ ಬದಲಾವಣೆ ಆಗುವುದಿಲ್ಲ ಎಂದರೆ ಸರಿ. 1964 ರ ಕ್ರಯಪತ್ರದಲ್ಲಿ ನಮೂದಾದ ಚೆಕ್ಕುಬಂದಿ ಒಳಗಿನ ಆಸ್ತಿ ಪ್ರಸ್ತುತ ದಾವೆಯ ಷೆಡ್ಯೂಲ್ ನ ಆಸ್ತಿ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ವಾದಿಯ ಉಳಿದ ಜಾಗ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ ನಾಗಪ್ಪನವರ ಹಂಚಿನ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಯಪ್ಪ ಹಾಗೂ ಕಮಲಮ್ಮನವರ ಆಸ್ತಿ. ದಾವಾ ಆಸ್ತಿಯ ದಕ್ಷಿಣಕ್ಕೆ ವಾದಿಯ ಉಳಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇಂದ್ರ ಸರ್ಕಾರದ ಸ್ಥಳ ಇರುತ್ತದೆ ಎಂದು ನುಡಿಯುತ್ತಾರೆ.

9. ನಾನು ನೋಡಿದ 1964 ರ ಕ್ರಯಪತ್ರದಲ್ಲಿ ಅಳತೆ ಪೂರ್ವ ಪಶ್ಚಿಮ 44 ಗಜ, ಉತ್ತರ ದಕ್ಷಿಣ 30 ಗಜ ಇರುತ್ತದೆ. ಸದರಿ ಕ್ರಯಪತ್ರದಲ್ಲಿ ಪತ್ರದಲ್ಲಿ ನಮೂದಾದ ಆಸ್ತಿಯ ಚೆಕ್ಕುಬಂದಿಯನ್ನು ನಾನು ನೋಡಿರುತ್ತೇನೆ ಎಂದರೆ ಸರಿ. 1964 ರ ಕ್ರಯಪತ್ರ ಮಾಡುವ ಕಾಲಕ್ಕೆ ನಾನು ಜನಿಸಿರಲಿಲ್ಲ ಎಂದರೆ ಸರಿ. ಸುಮಾರು 25 ವರ್ಷಗಳ ನನ್ನ ತಂದೆ ಹಾಗೂ ಅಜ್ಜ ಮನೆಯಲ್ಲಿ ನಿಪಿ 1 ರಲ್ಲಿರುವ ಕ್ರಯಪತ್ರ ಸುಳ್ಳು ದಾಖಲೆ ಎಂದು ತಿಳಿಸಿರುತ್ತಾರೆ. ದಿಃ 06.08.1979 ರಂದು ನಾನು ಜನಿಸಿರುತ್ತೇನೆ. ಇಲ್ಲಿಂದ ಸುಮಾರು 25 ವರ್ಷಗಳ ಹಿಂದೆ ನನ್ನ ತಂದೆ ಹಾಗೂ ಅಜ್ಜ ವಿಷಯವನ್ನು ತಿಳಿಸಿದಾಗ ನನ್ನ ವಯಸ್ಸು 20 ವರ್ಷ. ಯಾವ ಕಾರಣಕ್ಕಾಗಿ ಸದರಿ ವಿಷಯವನ್ನು ನನ್ನ ತಂದೆ ಹಾಗೂ ಅಜ್ಜ ಪ್ರಸ್ತಾಪಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಹಾಗಾಗಿ ನನ್ನ ತಂದೆ ಹಾಗೂ ಅಜ್ಜ ಸದರಿ ವಿಷಯವನ್ನು ನನಗೆ ತಿಳಿಸಿರುವುದಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಗ್ರಾಮ ಠಾಣಾ ಆಸ್ತಿಗಳನ್ನು ಪರಭಾರೆ ಮಾಡುವ ಕಾಲಕ್ಕೆ ನೊಂದಾಯಿತ ದಾಖಲೆ ಅವಶ್ಯಕವಾಗಿರುತ್ತವೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿನ ಸ್ವತ್ತಿಗೆ ಹಾಗೂ ದಾವಾ ಸ್ವತ್ತಿಗೆ ಯಾವುದೇ ನೊಂದಾಯಿತ ದಾಖಲೆಗಳು ಇರುವುದಿಲ್ಲ ಎಂದರೆ ನನ್ನ ಜನನ ಆಗಿರುವುದಿಲ್ಲ ನನಗೆ ದಾಖಲೆ ಸಿಕ್ಕಿರುವುದಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವೆಯನ್ನು ಸಲ್ಲಿಸಿದ ನಂತರ ಪಂಚಾಯಿತಿ, ತಾಲ್ಲೂಕು ಕಚೇರಿ ಹಾಗೂ ಸಬ್ ರಿಜಿಸ್ಟರ್ ಕಚೇರಿಗಳಿಂದ ದಾವೆಗೆ ಅನುಕೂಲಕರವಾದ ನೊಂದಾಯಿತ ದಾಖಲೆಗಳನ್ನು ಪಡೆಯುವಲ್ಲಿ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಪಡೆಯಲು ಸಲ್ಲಿಸಿದ ಅರ್ಜಿಯನ್ನು ಹೊರತುಪಡಿಸಿ ಬೇರೆ ಇನ್ನ್ಯಾವುದೇ ನೊಂದಾಯಿತ ದಾಖಲೆಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ದಾವಾ ಆಸ್ತಿಯ ಪೂರ್ಣ ವಿಸ್ತೀರ್ಣಕ್ಕೆ ಸಂಬಂದಿಸಿದಂತೆ ನಮ್ಮ ಕುಟುಂಬಕ್ಕೆ ಯಾವುದೇ ನೊಂದಾಯಿತ ದಾಖಲೆ ಇರುವುದಿಲ್ಲ ಎಂದರೆ ಗ್ರಾಮ ಠಾಣಾ ಹಾಗೂ ಪಂಚಾಯಿತಿ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ.

11. 1964 ರ ಕ್ರಯಪತ್ರದ ಆದಾರದ ಮೇರೆಗೆ ಕೊಂಡಂತಹ ವ್ಯಕ್ತಿ ಗೌಡರ ಹನುಮಂತಪ್ಪ ಬಿನ್ ಗೌಡರ ತಿಮ್ಮಯ್ಯ ಇವರ ಹೆಸರಿಗೆ ಪಂಚಾಯಿತಿ ದಾಖಲೆಗಳಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 28.06.2018 ರ ನಂತರ ಗ್ರಾಮ ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮಿಲ್ ಆಗಿ ನ್ಯಾಯಾಲಯಕ್ಕೆ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 1 ರ ಖಾತೆ. ಸಂ. 819 ರಲ್ಲಿ ಜಿ ಬಿ ನಾಗರಾಜ ಬಿನ್ ಬಸಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಜಿ ಬಿ ನಾಗರಾಜ ಪ್ರಸ್ತುತ ದಾವೆಯ ವಾದಿ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**Sd/-**

**C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**